affected families. They arranged for shelter and food for the night. Food arrangements were also made with the help of the local people for the next three days. The Deputy Commissioner, Kolar who was away on tour on 13th March 1979 visited the place the next day morning and inspected the houses which had been burnt.

52 houses have been completely damaged and require reconstruction. The loss of movable property is assessed at Rs. 2,25.000/- apart from the houses. An amount of Rs. 43,282/- has been sanctioned to give cash relief to the affected people. The Director of Social Welfare has also sanctioned a sum of Rs. 56,000/- to the victims as subsidy for construction of houses. All necessary measures were thus taken to give immediate relief to the victims of fire accident. The fire was reported to be accidental one and no foul play is suspected.

(ii) *re : Difficulty experienced by farmers in paying stamp duty in getting loans*

SRI K.H. HANUME GOWDA (Hassan)—Sir, I call the attention of the Minister for Revenue to the difficulty being experienced by the farmers in paying heavy stamp duty in getting loans.

SRI B. BASAVALINGAPPA (Minister for Revenue)— I wish to make the following statement :

The Karnataka Agricultural Credit Operations and Miscellaneous Provision Act, 1974 has come into effect from 17th July 1975. The Co-operative Societies and the credit agencies like the Banking companies, the Agriculture Refinance Corporation, Agro Industries Corporation give financial assistance to agriculturists in accordance with the provisions of the said Act. The declarations executed by the Agriculturists creating the charge over the property, as security for the amount of financial assistance, shall be deemed to have been duly registered in accordance with the provisions of the Registration Act and thereby the registration fee stands exempted for all such declaration.

Exemption from Stamp duty was given to all the agriculturists till 5th January 1979 for raising a loan upto Rs. 10,000/- from commercial Banks Primary Land Development Banks and Agro-Industries Corporation under the Scheme of Agricultural Finance to farmers (G.O.No. 19 EST 72 dated 22nd February 1972). Further, the instruments executed by Co-operative Societies dispensing production finance (including short-term, medium and marketing finance) and by their members relating to the business of such Society were fully exempted from payment of Stamp duty as per G.O. No. R.D. 33 CST 62 dated 15th/18th February 1969.

The question of payment of Stamp duty by agriculturists has been re-examined by Government recently. The existing system of giving full exemption from stamp duty for loans advanced by Co-operative Societies to farmers ignores the assets and holding of the income of the farmers. So also is the case in respect of loans by Commercial Banks and Primary Land Development Banks. Whether the exemption is in full or partial, it may not thus reach the intended group of weaker sections. This will continue to be so when only the amount of the loan irrespetive of the assets of the farmer and his income is the sole basis for exemption from Stamp duty.

Under the Land Reforms programme, surplus land is being distributed among the landless. The size of land thus distributed does not on the average one hectare (2½ acres) and this can be even less in several cases. When an erstwhile tenant becomes the occupant he requires financial assistance for developing his farm. Considering his financial position, it is clear that he will find it difficult to meet the ex ra expenditure on the stamp duty.

In the matter of advances by Commercial Banks for agriculture under the special programmes like the Small Farmers Development Agency, Marginal Farmers and Agricultural Labourers Developme t Agency, Differential Interest Rates l ans for marginal farmers etc., the beneficiaries who belong to weaker sections of the Society are unable to get the concession which were allow d to the loans given by Co-operatives. In the case of the latter, most of the beneficiaries seem to belong to better off sections of Society.

Taking into considerat on, all the above points, Government took the view that there was a strong case for giving full exemption from stamp duty on loans upto Rs. 10,000/- given by both the Co-operati es and the Commercial Banks etc., which should be confined to only the Marginal farmers whose total holdings do not exceed one hectare of dry land (2½ acres) or 0.5 hactares (1¼ acres) of irrigated land. Accordingly, Government in Order No. RD 86 EST 78 dated 5th January and 19th March 1979 have exempted stamp duty only to the marginal farmers, whose land holdings do not exceed one hectares (2½ acres) of dry land and 0.5 hectares (1¼ acres) of irrigated land for obtaining a loan upto Rs. 10,000/- from Commercial Banks, Co-operative Land Development Banks, Karnataka State Agro-Industries Corporation, Co-operative Societies' and the credit agencies as defined under the Karnataka Agricultural Credit Operation and Miscellaneous Provision Act 1975.

As regards reconveyances of mortgage property, the rate of Stamp duty is payable at the same conveyance rate upto consideration of

Rs. 1,000/- while the rate for consideration above Rs. 1,000/- is limited to the amount payable as duty for the consideration of Rs. 1,000/-.

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ, ಈ ಕಮರ್ಷಿಯಲ್ ಬ್ಯಾಂಕ್‌ಗಳಿಂದ, ಸರ್ಕಾರ ಸಂಘಗಳಿಂದ ರೈತ ೧೦೦ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುತ್ತಾನೆ ಎಂದು ಇಟ್ಟುಕೊಳ್ಳೋಣ. ಅದರಲ್ಲಿ ಮೊದಲೇ ೧೦½ ರೂಪಾಯಿಗಳನ್ನು ಪೇರು ಎಂದು ಹಿಡಿದುಕೊಳ್ಳುತ್ತಾರೆ. ಆಮೇಲೆ ರಿಜಿಸ್ಟರ್ ಲ್ಯಾಂಡ್ ಮಾರ್ಟ್‌ಗೆಜ್‌ಗೆ ೬ ರೂ, ಸ್ಟ್ಯಾಂಪ್ ಡ್ಯೂಟಿಗೆ ೬ ರೂಪಾಯಿ, ಇತರೆ ಖರ್ಚಿಗೆ ೬–೭ರೂಪಾಯಿ ಗಳಷ್ಟು ಬೀಳುತ್ತದೆ. ಇದಲ್ಲದೇ ಇನ್ನೂ ಅನೇಕ ರೀತಿಯಲ್ಲಿ ಹಣ ಹೋಗಿ ೧೦೦ ರೂಪಾಯಿ ಸಾಲ ತೆಗೆದುಕೊಂಡರೆ ಅವನ ಕೈಯಿಗೆ ೮೦ ರೂಪಾಯಿಗಳು ಮಾತ್ರ ಬರುತ್ತವೆ. ಇದಕ್ಕೆ ೨೦ ಪರ್ಸೆಂಟ್ ಬಡ್ಡಿಯನ್ನು ಕೊಡಬೇಕಾಗಿ ಬರುತ್ತದೆ. ಬಡರೈತರು ದೇಶದಲ್ಲಿ ಉತ್ಪತ್ತಿಯನ್ನು ಜಾಸ್ತಿ ಮಾಡ ಬೇಕು, ಅವರ ಮಕ್ಕಳು ಚೆನ್ನಾಗಿ ಬದುಕಿ ಬಾಳಬೇಕು. ಅವರೂ ಚೆನ್ನಾಗಿ ಇರಬೇಕು ಎಂದು ಹೇಳುವ ನಾವು ಇಷ್ಟೊಂದು ರೇಟನ್ನು ಚಾರ್ಜ್ ಮಾಡುವುದಾದರೆ ಅದನ್ನು ತೀರಿಸುವ ಶಕ್ತಿ ಅವನಿಗೆ ಇರುತ್ತದೆಯೇ ಎಂಬುದನ್ನು ನಾವು ಲೆಕ್ಕ ಹಾಕಬೇಕು. ಇವತ್ತಿನ ದಿವಸ ನಾವು ಇನ್ನೊಂದು ವಿಚಾರವನ್ನು ಆಲೋಚನೆ ಮಾಡಬೇಕು. ರೈತ ಉತ್ಪತ್ತಿ ಮಾಡತಕ್ಕಂಥ ರಾಗಿ, ಭತ್ತ, ಜೋಳ ಮುಂತಾದ ಪದಾರ್ಥಗಳ ಬೆಲೆಗಳು ಇಳಿದು ಹೋಗುತ್ತವೆ, ಈ ಬಗ್ಗೆ ಸರಿಯಾದ ಬೆಲೆಯನ್ನು ಫಿಕ್ಸ್ ಮಾಡುವವರು ಯಾರು ? ಇದನ್ನು ಯಾರೂ ಕೇಳುವವರಿಲ್ಲ. ಅಲ್ಲದೇ ರೈತನು ಕೊಂಡುಕೊಳ್ಳತಕ್ಕಂಥ ಪದಾರ್ಥಗಳ ಬೆಲೆಗಳೂ ಜಾಸ್ತಿಯಾಗುತ್ತವೆ, ರೈತನು ಬೆಳೆಯತಕ್ಕಂಥ ಪದಾರ್ಥಗಳ ಬೆಲೆಗೂ, ಅವನು ಕೊಂಡು ಕೊಳ್ಳತಕ್ಕಂಥ ಪದಾರ್ಥಗಳ ಬೆಲೆಗೂ ಒಂದಕ್ಕೊಂದು ಸಾಮರಸ್ಯ ಇಲ್ಲ. ಒಂದು ಏರಿದರೆ ಒಂದು ಇಳಿಯುತ್ತದೆ. ಈ ಪರಿಸ್ಥಿತಿಯಲ್ಲಿ ರೈತರು ಆರ್ಥಿಕವಾಗಿ ತುಂಬಾ ತೊಂದರೆಗೆ ಒಳಗಾಗಿರುವಾಗ ೬ ಪರ್ಸೆಂಟ್ ಬಡ್ಡಿಯನ್ನು ಹಾಕಿದರೆ ಅವರಿಗೆ ಇನ್ನೂ ತೊಂದರೆಯಾಗುತ್ತದೆ. ೧೦ ವರ್ಷಗಳ ಹಿಂದೆ ಈ ದೇಶದಲ್ಲಿ ಆಹಾರ ಪದಾರ್ಥಗಳು ಸರಿಯಾಗಿ ಉತ್ಪತ್ತಿಯಾಗದೇ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೊರ ದೇಶಗಳಿಗೆ ಹೋಗಿ ಅಲ್ಲಿಂದ ತಂದು ಮಾಡಿದಂಥ ಪರಿಸ್ಥಿತಿ ಇತ್ತು, ಇವತ್ತು ರೈತರು ಹೆಚ್ಚು ಹೆಚ್ಚು ಬೆಳೆಗಳನ್ನು ಬೆಳೆದು ದೇಶವನ್ನು ಸಮೃದ್ಧಗೊಳಿಸಿದ್ದಾರೆ. ಈ ದಿನ ಅವರನ್ನು ಕಡೆಗಣಿಸಿ ಈ ರೀತಿ ತೊಂದರೆ ಕೊಡುವುದಾದರೆ ಇನ್ನೊಂದು ಸಾರಿ ಭಿಕ್ಷಾಪಾತ್ರೆ ಹಿಡಿದು ಹೊರದೇಶಕ್ಕೆ ಹೋಗಿ ಬೇಡ ತಕ್ಕಂಥ ಪರಿಸ್ಥಿತಿ ಬರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಇಲ್ಲಿರತಕ್ಕಂಥ ಸ್ಟ್ಯಾಂಪ್ ಡ್ಯೂಟಿ ರಾಷ್ಟ್ರದ ಯಾವ ದೇಶದಲ್ಲೂ ಇಲ್ಲ, ಸಮ್ಮಿಲ್ಲಿರುವಷ್ಟು ಸ್ಟ್ಯಾಂಪ್ ಡ್ಯೂಟಿ ಹರಿಯಾಣದಲ್ಲಿ, ಪಂಜಾಬ್‌ನಲ್ಲಿ, ಆಂದ್ರಪ್ರದೆ ಶದಲ್ಲಿ. ಮತ್ತು, ತಮಿಳುನಾಡಿನಲ್ಲೂ ಇಲ್ಲ. ಕರ್ನಾಟಕವನ್ನು ಬಿಟ್ಟರೆ ಎಲ್ಲಾ ದೇಶಗಳಲ್ಲೂ ರೈತರು ಪಡೆಯುತಕ್ಕಂಥ ಸಾಲಕ್ಕೆ ಸ್ಟ್ಯಾಂಪ್ ಡ್ಯೂಟಿಯನ್ನು ಎಸ್ಸೆಂಪ್ಟ್ ಮಾಡಿದ್ದಾರೆ. ಇದರ ಉದ್ದೇಶ ಏನೆಂದರೆ ರೈತ ಲಿಬರಲ್ ಆಗಿ ಸಾಲವನ್ನು ತೆಗೆದುಕೊಳ್ಳಲಿ, ಅದನ್ನು ಹೆಚ್ಚು ಹೆಚ್ಚು ಜಮೀನುಗಳಲ್ಲಿ ಹಾಕಲಿ, ಹೆಚ್ಚು ಉತ್ಪಾದನೆ ಮಾಡಲಿ, ಆದರಿಂದ ದೇಶವನ್ನು ಅಭಿವೃದ್ಧಿ ಮಾಡಲಿ, ದೇಶದ ಸಂಪತ್ತನ್ನು ಜಾಸ್ತಿ ಮಾಡಲಿ ಎನ್ನುವ ದೃಷ್ಟಿಯಿಂದ. ಅವರು ಹಾಗೆ ಮಾಡಿರುವಾಗ ನವ್ಮ ಕರ್ನಾಟಕ ರಾಜ್ಯದಲ್ಲಿ 1½ ಎಕರೆ, ೨ ಎಕರೆ ಇರತಕ್ಕಂಥ ನಿರ್ಗತಿಕರಿಗೆ ಫ್ರೀ ಇಂಟರೆಸ್ಟ್ ಎಂದು ಕೊಟ್ಟರು ಏನೂ ತಪ್ಪು ಇಲ್ಲ. ಇದನ್ನು ನಾನು ಸಪೋರ್ಟ್ ಮಾಡುತ್ತೇನೆ. ನಾವೆಲ್ಲರೂ ಇದನ್ನು ಸಪೋರ್ಟ್ ಮಾಡುತ್ತೇವೆ.

ಅಧ್ಯಕ್ಷರು.—ಇದು ಗಮನಸೆಳೆಯುವ ಸೂಚನೆಯಾಗಿದೆ. ಈ ಬಗ್ಗೆ ೨–೩ ಸ್ಪಷ್ಟೀಕರಣಗಳನ್ನು ನೀವು ಕೇಳಿ. ಇದರ ಬಗ್ಗೆ ಭಾಷಣ ಮಾಡುವುದಕ್ಕೆ ಹೋಗಬೇಡಿ. ಇದರಲ್ಲಿ ಪ್ರಮುಖವಾದ ಅಂಶ ಗಳನ್ನು ಮಾತ್ರ ಹೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ. ಪರಿಸ್ಥಿತಿ ಹೀಗಿದೆ. ಆದ್ದರಿಂದ ದಯಮಾಡಿ ವೀಕರ್ ಸೆಕ್ಷನ್‌ಗೆ ಬಡವರಿಗೆ ೬-೧೦ ಪರ್ಸೆಂಟ್ ಇಂಟರೆಸ್ಟ್ ಏನು ಹಾಕಿದ್ದೀರಿ, ಇದು ಜಾಸ್ತಿ ಇದೆ. ಇದನ್ನು ಫ್ರೀಯಾಗಿ ಕೊಡಬೇಕು. ನಾವು ಖಂಡಿತವಾಗಿಯೂ ಇದನ್ನು ಸಪೋರ್ಟ್ ಮಾಡುತ್ತೇವೆ. ಅವರಿಗೆ ಫ್ರೀ ಇಂಟರೆಸ್ಟ್ ಕೊಟ್ಟರೆ ನಾವೆಲ್ಲರೂ ಸಂತೋಷ ಪಡುತ್ತೇವ. ಇದರಲ್ಲಿ ಅಧಿಕಾರಿಗಳು ಕುತಂತ್ರ ಮಾಡು ತ್ತಾರೆ. ನಾವು ಹೋಗಿ ಕೇಳಿದರೆ ಏನೇನೋ ಹೇಳುತ್ತಾರೆ. ಮಾನ್ಯ ಬಸವಲಿಂಗಪ್ಪನವರಿಗೆ ಇದೆಲ್ಲಾ

ಅರ್ಥವಾಗಿಲ್ಲ ಎಂದು ಕಾಣುತ್ತದೆ. ಅವರು ಇದನ್ನೆಲ್ಲಾ ಅರ್ಥ ಮಾಡಿಕೊಂಡಿದ್ದರೆ ಅವರು ಇದಕ್ಕೆ ಒಪ್ಪುತ್ತಾ ಇರಲಿಲ್ಲ. ದೇಶದಲ್ಲಿ ೮೦ ಭಾಗ ಇರತಕ್ಕಂಥ ರೈತರ ಮೇಲೆ ಹೆಚ್ಚಿನ ಇಂಟರೆಸ್ಟ್ ಹಾಕಿ ಆರ್ಥಿಕವಾಗಿ ಅವರು ಹಾಳಾಗಬೇಕು ಎಂದು ಮಾಡಿರುವುದು ಅಧಿಕಾರಿಗಳ ಕುತಂತ್ರವೇ ಹೊರತು ಇದು ಸರ್ಕಾರದ ಭಾವನೆಯಲ್ಲಿವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಬಸವಲಿಂಗಪ್ಪನವರಿಗೆ ಬಡವರ ಬಗ್ಗೆ ಅನುಕಂಪ ಇದೆ. ಸಮಾಜದಲ್ಲಿ ಬಡವರು ಚೆನ್ನಾಗಿ ಬಾಳಬೇಕು, ಬದುಕಬೇಕು ಎನ್ನತಕ್ಕಂಥ ಮನೋಭಾವನೆ ಇರತಕ್ಕಂಥ ಮಾನ್ಯಸಚಿವರಿಗೆ ಕುತಂತ್ರದ ಭಾವನೆ ಬಂದಿಲ್ಲ. ಇದು ಅಧಿಕಾರಿಗಳ ಕುತಂತ್ರ. ಅವರ ಕುತಂತ್ರಕ್ಕೆ ಮಾನ್ಯ ಬಸವಲಿಂಗಪ್ಪನವರು ಒಳಗಾಗಬಾರದು ಎಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಆದ್ದರಿಂದ ನಮ್ಮ ರಾಷ್ಟ್ರದ ಬೇರೆ ರಾಜ್ಯಗಳಲ್ಲಿ ಇರುವ ಹಾಗೆ ನಮ್ಮ ರಾಜ್ಯದಲ್ಲೂ ಅವರಿಗೆ ಎಗ್ಸೆಂಪ್ಷನ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. $1\frac{1}{2}$, ೨ ಎಕರೆ ಗದೆ ಇರುವವರಿಗೆ ೧೦ ಸಾವಿರ ರೂಪಾಯಿಗಳವರೆಗೆ ಎಗ್ಸೆಂಪ್ಷನ್ ಕೊಡಬಹುದು ಎಂದು ಹೇಳಿದ್ದಾರೆ. ಆದರೆ ಅಲ್ಲಿ ಬೋರ್‌ವೆಲ್ ಹಾಕಿ, ಪಂಪ್‌ಸೆಟ್ ಹಾಕಬೇಕಾದರೆ ೧೮ ಸಾವಿರ ರೂಪಾಯಿಗಳು ಬೀಳುತ್ತವೆ. ಈ ವೀಕರ್‌ಸೆಕ್ಷನ್‌ನವರು ಪುನಃ ಟ್ಯಾಕ್ಸ್ ಕೊಡಲೇಬೇಕಾಗಿ ಬರುತ್ತದೆ, ಅದೂ ಅಲ್ಲದೇ ಒಂದೂವರೆ ಎರಡು ಎಕರೆ ಜಮೀನು ಇರತಕ್ಕಂಥ ವೀಕರ್‌ಸೆಕ್ಷನ್‌ನವರಿಗೆ ತಹಶೀಲ್ದಾರ್ ಕಡೆಯಿಂದ ಸರ್ಟಿಫಿಕೇಟ್ ತರಬೇಕು ಎಂದು ಹೇಳಿದ್ದಾರೆ, ಅವರಿಂದ ಸರ್ಟಿಫಿಕೇಟ್ ತರಬೇಕಾದರೆ ಅವರಿಗೆ ಕಷ್ಟ ವಾಗುತ್ತಿದೆ. ಅಧಿಕಾರಿಗಳ ಹತ್ತಿರ ಅವರು ಮೂರು ಹೊತ್ತೂ ಆಲೆಯುವುದಕ್ಕಾಗುವುದಿಲ್ಲ, ಅವರ ಹತ್ತಿರಕ್ಕೆ ಹೋಗುವುದಕ್ಕೆ ರೈತರಿಗೆ ಟೈಮ್ ಸಹ ಇರುವುದಿಲ್ಲ. ಇವೆಲ್ಲಾ ಕಷ್ಟ ಇದೆ, ಆದ್ದರಿಂದ ಬೇರೆ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಕೂಡ ರೈತರಿಗೆ ಎಗ್ಸೆಂಪ್ಷನ್ ಕೊಡಬೇಕು. ಇದನ್ನು ಸರ್ಕಾರ ದವರು ಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇದು ಆಗದಿದ್ದರೆ ಮೊದಲು ಅವರಿಗೆ ಏನು ಎಗ್ಸೆಂಪ್ಷನ್ ಕೊಟ್ಟಿದ್ದರೋ ಅದನ್ನೇ ಮುಂದುವರಿಸ ಬೇಕು ಎಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಡಿ.ಟಿ. ರಾಮು.—ಸ್ವಾಮಿ, ಇದರಲ್ಲಿ ಇರುವಂಥ ತೊಂದರೆಯನ್ನು ನಾನು ಗಮನಕ್ಕೆ ತರಬಯಸುತ್ತೇನೆ, ಇದರಲ್ಲಿ ೧೦ ಸಾವಿರದವರೆಗೆ ಲಿಮಿಟ್ ಇರತಕ್ಕಂಥ ರೈತರಿಗೆ ಮಾತ್ರ ಸ್ಟಾಂಪ್ ಡ್ಯೂಟಿ ಮೇಲಿನ ಎಗ್ಸೆಂಪ್ಷನ್ ಇದೆಯೆಂದು ತಾವು ಕಾನೂನು ತಂದಿದ್ದೀರಿ. ಇದನ್ನು ಸಣ್ಣ ರೈತ ರಿಗೂ ಅನ್ವಯಿಸಬೇಕೆಂಬುದೇ ನನ್ನ ಕೋರಿಕೆ. ಹಿಂದೆ ೧೦ ಸಾವಿರದವರೆಗೆ ಸ್ಟಾಂಪ್ ಡ್ಯೂಟಿ ಇಲ್ಲ ಎಂದು ಮಾಡಿ, ೧೦ ತಿಂಗಳು ಆದಮೇಲೆ $\frac{1}{8}$ ಪರ್ಸೆಂಟ್ ಹಾಕಿದ್ದರು. ಈಗ ಅದೂ ಇಲ್ಲ. ಈ ಮಾರ್ಜಿನಲ್ ಫಾರ್ಮರ್ಸ್‌ಗೆ ೧೦ ಸಾವಿರದವರೆಗೆ ವಸೂಲು ಮಾಡಬೇಡಿ, ಆಮೇಲೆ ವಸೂಲು ಮಾಡಿ ಎಂದು ಸೂಚನೆ ಕೊಟ್ಟಿರುವುದರಿಂದ ಸಣ್ಣ ರೈತರಿಗೆ ಹೇಗೆ ಮಾಡಬೇಕು ಮತ್ತು ಬೇರೆ ರೈತರಿಗೆ ಹೇಗೆ ಮಾಡಬೇಕೆನ್ನುವುದು ಸಬ್‌ರಿಜಿಸ್ಟ್ರಾರ್‌ರವರಿಗೂ ಗೊತ್ತಿಲ್ಲ. ನಿನ್ನೆ ಮೊನ್ನೆಯಿಂದ ಸುಮಾರು ೫೦-೬೦ ಮಂದಿ ರೈತರು ಸಾಲ ತೆಗೆದುಕೊಂಡು. ಇದರ ಬಗ್ಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರ ಹತ್ತಿರ ಹೋಗಿ 'ರಿಜಿಸ್ಟರ್ ಮಾಡಿಕೊಡಿ' ಎಂದು ಕೇಳಿದರೆ ಅವರು 'ಸರ್ಕಾರದಿಂದ ನಿರ್ದಿಷ್ಟವಾದ ಸೂಚನೆ ಯನ್ನು ತೆಗೆದುಕೊಂಡು ಬನ್ನಿ, ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಒಂದು ಕ್ಲಾರಿಫಿಕೇಷನ್ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಅಣ್ಣಾರಾವ್ ಭೀಮರಾವ್ ಪಾಟೀಲ್.—ಮಾನ್ಯ ಅಧ್ಯಕ್ಷರೆ. ಸ್ಟಾಂಪ್ ಡ್ಯೂಟಿಯಿಂದ ಬಹಳ ತೊಂದರೆಯಾಗಿದೆಯೆಂದು ಗುಲ್ಬರ್ಗಾ ಭಾಗದಿಂದ ಅರ್ಜಿಗಳು ಬಂದಿವೆ. ಈ ವಿಷಯ ಮಾನ್ಯ ಸಚಿವರಿಗೂ ಗೊತ್ತಿದೆ. ಸಾಲ ತೆಗೆದುಕೊಳ್ಳತಕ್ಕವರಿಗೆ ಏನು ಸ್ಟಾಂಪ್ ಡ್ಯೂಟಿ ಹಾಕಿದ್ದೀರಿ ಇದರಿಂದ ಭಾರತ ದೇಶದಲ್ಲಿ. ಪ್ರತಿಯೊಂದು ರಾಜ್ಯದಲ್ಲೂ ಈ ಅನ್ಯಾಯವಾದ ಕಾನೂನನ್ನು ಏನು ಮಾಡಿದ್ದೀರಿ ಇದರಿಂದ ಬಹಳ ಅನ್ಯಾಯವಾಗಿದೆ ಎಂದು ನಾನು ನಿಮ್ಮ ಮುಖಾಂತರ ಮಾನ್ಯ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸಣ್ಣ ರೈತರಿಗೆ ಈ ಸ್ಟಾಂಪ್ ಡ್ಯೂಟಿಯಿಂದ ರಿಯಾಯಿತಿ ಕೊಡಬೇಕು. ಮಾರ್ಜಿನಲ್ ಫಾರ್ಮರ್ಸ್ ಎಂದು ಏನು ಮಾಡಿದ್ದೀರಿ ಅವರಿಗೆ ಕಂಪ್ಲೀಟ್ ಎಕ್ಸಂಪ್ಷನ್ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಒಂದು ಕಡೆ ಬೆಳೆಯತಕ್ಕ ರೈತ ಬೆಳೆ ಬಾರದಿರುವಾಗ ಅವನು ಹತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುತ್ತಾನೆ. ಅದನ್ನು ತೆಗೆದುಕೊಳ್ಳುವಾಗ ತಾವು ಸ್ಟಾಂಪ್ ಡ್ಯೂಟಿಯನ್ನು ಮನ್ನಾ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

೨, ೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಶ್ರೀಮಾನ್ ಕೆ. ಎಚ್. ಹನುಮೇಗೌಡರು ಬಹಳ ಸುಧೀರ್ಘವಾಗಿ ಮಾತನಾಡಿದ್ದಾರೆ. ಇಲ್ಲಿ ಅವರು ರೈತರ ಬಗ್ಗೆ ಯಾವ ರೀತಿಯ ಕಳವಳವನ್ನು ಸೂಚಿಸಿದ್ದಾರೆ ಅದೇ ಕಳವಳ ನಮಗೂ ಇದೆ.

ಶ್ರೀ ಮಳ್ಳೂರು ಆನಂದರಾವ್.—ಕಳವಳವನ್ನು ಯಾವ ರೀತಿ ಅಳೆಯುತ್ತೀರಾ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ —ರೈತರು ಎಲ್ಲೇ ಇರಲಿ. ಅವರು ರೈತರೇ. ಉತ್ತರ ಭಾರತದಲ್ಲಿ 'ಕಿಸಾನ್' ಎಂದು ಹೇಳುತ್ತಾರೆ. ನಾವು ಇಲ್ಲಿ ರೈತರು ಎಂದು ಹೇಳುತ್ತೇವೆ. ಎಲ್ಲರೂ ಒಂದೇ ಎನ್ನುವ ತಕ್ಕ ಭಾವನೆ ಉಳ್ಳವರು ಶ್ರೀಮಾನ್ ಹನುಮೇಗೌಡರು. ನಾವು ಮಾಡಿರುವ ಈ ಕಾನೂನನ್ನು ಪರಿಶೀಲನೆ ಮಾಡಿ ಯಾರು ಬಹಳ ಕೀಳು ಅವಸ್ಥೆಯಲ್ಲಿದ್ದಾರೆ ಮಾರ್ಜಿನಲ್ ಫಾರ್ಮರ್ಸ್ ಯಾರಿದ್ದಾರೆ ಅಂಥವರಿಗೆ ನಾವು ಏನಾದರೂ ರಿಯಾಯಿತಿ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಶ್ರೀಮಾನ್ ಹನುಮೇಗೌಡರು ಹೇಳಿದಹಾಗೆ ಯಾವ ಅಧಿಕಾರಿಗಳೂ ಪ್ರಭಾವ ಬೀರಿ ಇದನ್ನು ತಂದಿದ್ದಲ್ಲ. ಅದು ಸುಳ್ಳು ಮಾತು. ಸ್ವತಹ ನಾನೇ ಒಪ್ಪಿ, ಆಲೋಚನೆ ಮಾಡಿ ತಂದಿರುವುದು. ಬಡವರಾದ ಎಲ್ಲ ರೈತರಿಗೂ ರಿಯಾಯಿತಿ ಕೊಡುವುದರಲ್ಲಿ ಅಭ್ಯಂತರವೇನೂ ಇಲ್ಲ. ಮಾರ್ಜಿನಲ್ ಫಾರ್ಮರ್ಸ್‌ಗೂ ರಿಯಾಯಿತಿಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಒಂದು ನಿಗದಿ ಮಾಡಿದ ಪ್ರಕಾರದಲ್ಲಿ ಒಂದು ಆರ್ಡರ್‌ನ್ನು ಜಾರಿ ಮಾಡಿದ್ದೇವೆ. ಬಡವರಿಗೂ ಹೆಚ್ಚಿನ ಸಹಾಯ ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನೂ ಹೆಚ್ಚು ಸಹಾಯವನ್ನು ರೈತರಿಗೆ ಮಾಡಬೇಕು ಎಂದು ಮಾನ್ಯ ಸದಸ್ಯರ ಆಸೆ ಇದ್ದರೆ ನಾನು ಅವರ ಜೊತೆಗೆ ತರ್ಕ ಮಾಡುವುದಕ್ಕೆ ಸಾಧ್ಯವಿದೆ. ಅವಶ್ಯಕವಿದ್ದರೆ ಈ ವಿಷಯವನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಮಾಡುತ್ತೇನೆ. ನಮ್ಮ ಪ್ರಕಾರ ಎರಡೂವರೆ ಎಕರೆ ಉಳ್ಳಂತಹ ಮಾರ್ಜಿನಲ್ ಫಾರ್ಮರ್ಸ್ ಏನಿದ್ದಾರೆ ಅವರಿಗೆ ಈ ರಿಯಾಯಿತಿಯನ್ನು ಕೊಡಬೇಕೆಂದು ಮಾಡಿದ್ದೇವೆ. ಇದನ್ನು ಹೆಚ್ಚು ಮಾಡಬೇಕೆನ್ನುವತಕ್ಕ ವಿಷಯ ವಿದ್ದರೆ ನಾನು ನಿಮ್ಮ ಹತ್ತಿರ ತರ್ಕ ಮಾಡಿ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಯವರೆ, ಉತ್ತರದಲ್ಲಿ ಕಿಸಾನ್, ದಕ್ಷಿಣದಲ್ಲಿ ರೈತ, ಎರಡೂ ಒಂದೇ ಸ್ವಾಮಿ. ತಾವು ಮಾಡಿರತಕ್ಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಯಾವ ರೈತನು ೫೪ ಎಕರೆಗಿಂತ ಜಾಸ್ತಿ ಡ್ರೈಲ್ಯಾಂಡ್ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ವೆಟ್ ಲ್ಯಾಂಡ್ ೧೦ ಎಕರೆ ಮೇಲ್ಪಟ್ಟು ಇದ್ದರೆ ಅವನು ಲ್ಯಾಂಡ್ ಕಳೆದುಕೊಳ್ಳುತ್ತಾನೆ. ಆದ್ದರಿಂದ ಯಾವನಿಗೂ ಇವತ್ತು ೫೪ ಎಕರೆಗೆ ಮೇಲ್ಪಟ್ಟು ಡ್ರೈಲ್ಯಾಂಡ್ ಇರುವುದಿಲ್ಲ. ನಿಮ್ಮ ಪ್ರಕಾರ ಇವತ್ತು ದೊಡ್ಡ ಫ್ಯಾಮಿಲಿ ಇರತಕ್ಕಂತಹ ಒಬ್ಬ ಕ್ಲಾಸ್ ಫೋರ್ ಸರ್ವೆಂಟ್, ಎಂದರೆ ನೀವು ಹೇಳುವ ಚಪ್ಪಾಸಿ ಏನಿದ್ದಾನೆ ಅವನಿಗೆ ಕೊಡತಕ್ಕ ಒಂದು ತಿಂಗಳ ಸಂಬಳವನ್ನು ೫೪ ಎಕರೆ ಜಮೀನು ಇಟ್ಟುಕೊಂಡಿರುವ ರೈತನಿಗೆ ಕೊಟ್ಟು ಅವನ ಜಮೀನನ್ನು ಈ ಕ್ಲಾಸ್ ಫೋರ್ ಸರ್ವೆಂಟ್ ಚಪ್ಪಾಸಿಗೆ ಕೊಡಿ ಸ್ವಾಮಿ. ಆಗ ಇವರಿಬ್ಬರಲ್ಲಿರುವ ಅಂತರ ನಿಮಗೆ ಗೊತ್ತಾಗುತ್ತದೆ. ಈ ನಿಮ್ಮ ಚಪ್ಪಾಸಿ ಕಷ್ಟ ಗೊತ್ತಾಗುತ್ತದೆ. ಹಾಗೂ ಗುಜರಾತು, ಮಹಾರಾಷ್ಟ್ರ ಹಾಗೂ ತಮಿಳುನಾಡು ಮುಂತಾದ ನೆರೆ ರಾಜ್ಯಗಳಲ್ಲಿ ರೈತರಿಗೆ ಒದಗಿಸಿರುವ ಸೌಲಭ್ಯಗಳು ಅನೇಕವಿವೆ. ಇಲ್ಲಿನ ರೈತರಿಗೆ ಟ್ಯಾಕ್ಸ್ ಕಡಿಮೆ ಮಾಡಿದ್ದಾರೆ. ಈಗ ರೈತನಿಗೆ ವಾಟರ್‌ರೇಟ್ ಹಾಗೂ ಎಲೆಕ್ಟ್ರಿಸಿಟಿ ಚಾರ್ಜಸ್ ಕಡಿಮೆ ಮಾಡಿದ್ದಾರೆ. ಕೋ ಆಪರೇಟಿವ್ ಬ್ಯಾಂಕ್‌ಗಳ ಮೂಲಕ ರೈತ ಲೋನ್ ತೆಗೆದುಕೊಳ್ಳಬೇಕಾಗುತ್ತದೆ. ಸರ್ವೇಸಾಧಾರಣವಾದ ರೈತ ೧೦,೦೦೦ ರೂಪಾಯಿಗಳ ಸಾಲ ತೆಗೆದುಕೊಳ್ಳಬೇಕಾದರೆ ಟ್ಯಾಕ್ಸ್ ಹಾಕಿದ್ದಾರೆ. ಇಲ್ಲಿಗೆ ಮಧ್ಯಮ ವರ್ಗಕ್ಕೆ ಸೇರಿದ ರೈತ ಅಂದರೆ ಎರಡು ಎಕರೆ ಹತ್ತು ಎಕರೆ ಜಮೀನುಳ್ಳಂತಹ ರೈತ ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ರೈತ ತಾನು ಏನಾದರೂ ಬೆಳೆಯಬೇಕಾದರೆ ಅವನು ಹತ್ತು ಸಾವಿರದ ವರೆಗೆ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದಾಗಿ ಟ್ಯಾಕ್ಸ್ ಕೊಡಬೇಕಾಗಿರುವುದರಿಂದ ರೈತರು ಸಾಲ ತೆಗೆದುಕೊಳ್ಳುವುದಕ್ಕೆ ಮುಂದೆ ಬರುವುದಿಲ್ಲ. ನಾನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಅಧ್ಯಕ್ಷರಿಗೆ ಬರೆದು ಈ ಬಗ್ಗೆ ವಿಚಾರ ಮಾಡಿದೆ ಈ ಮೇಲಿನ ವಿಷಯದಿಂದಾಗಿ ಅಲ್ಲಿನ ಸಾಲದ ವ್ಯವಹಾರ ನಿಂತುಹೋಗಿದೆಯೆಂದು ತಿಳಿದು ಬಂತು. ರೈತರೆಲ್ಲಾ ಇವತ್ತು ಬಹಳ ತೊಂದರೆಯಲ್ಲಿ ಇದ್ದಾರೆ ಜಿಗ್ ಲ್ಯಾಂಡ್ ಲಾರ್ಡ್ಸ್ ಯಾರೂ ಇಲ್ಲ ರೈತರೆಲ್ಲರೂ ಸಾಲ ಪಡೆದುಕೊಳ್ಳುತ್ತಿಲ್ಲವಾದ್ದರಿಂದ ಅವರೆಲ್ಲರೂ ಶ್ರೀಮಂತರೆಂದು ತಿಳಿದುಕೊಂಡಿದ್ದೀರಿ. ಆದರೆ ಇದು ನಿಜಸಂಗತಿಯಲ್ಲ. ಸಾಹುಕಾರ ರೈತರು ಬಹಳ ಕಮ್ಮಿ ಇದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಶ್ರೀಮಂತ ರೈತರು ಎಂದು ತಾವು ಹೇಳಿದ್ದೀರಿ ಲ್ಯಾಂಡ್ ರಿಫಾರ್ಮ್ಸ್ ಕಾನೂನು ಆದಮೇಲೆ ಶ್ರೀಮಂತರು ಯಾರೂ ಇಲ್ಲ. ಸೆಂಟ್ರಲ್ ಪಿ.ಎಲ್.ಡಿ. ಬ್ಯಾಂಕ್ ನವರು ರೈತರಿಗೆ ಒಂದು ಕೋಟಿ ೭೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುವುದಕ್ಕೆ ಮಂಜೂರು ಮಾಡಿದ್ದಾರೆ. ಆದರೆ ಇದರಿಂದ ಸಾಲವನ್ನು ರೈತರು ಕೇವಲ ೭೫ ಲಕ್ಷ ರೂಪಾಯಿಗಳನ್ನು ಮಾತ್ರ ತೆಗೆದು ಕೊಂಡಿದ್ದಾರೆ. ಇದಕ್ಕೆ ಆರು ಪರ್ಸೆಂಟ್ ಬಡ್ಡಿ ಬೀಳುತ್ತದೆ, ಹಾಗೂ ಆರು ಪರ್ಸೆಂಟ್ ಸ್ಟ್ಯಾಂಪ್ ಡ್ಯೂಟಿ ಬೀಳುತ್ತದೆ. ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಏನು ಮಾಡಿದರೂ ರೈತರು ಮುಂದೆ ಬರುವುದಿಲ್ಲ. ಪೂರ್ತಿ ಸಾಲವನ್ನು ರೈತರಿಗೆ ಕೊಡುವುದಕ್ಕಾಗುವುದಿಲ್ಲ ವೆಂದು ಆ ಬ್ಯಾಂಕಿನವರು ಹೇಳುತ್ತಿದ್ದಾರೆ. ರಿಸರ್ವ್ ಬ್ಯಾಂಕ್‌ನವರು ಲಿಬರಲೈಸೇಷನ್ ಮಾಡಿ ರೈತರಿಗೆ ಹಣವನ್ನು ಸಾಲದ ರೂಪವಾಗಿ ಒದಗಿಸಿ ಎಂದು ಇತ್ತೀಚೆಗೆ ಹೇಳಿಕೆ ಕೊಟ್ಟಿದ್ದಾರೆ. ಆದರೂ ಸ್ಯಾಂಕ್ಷನ್ ಆಗಿರುವ ಈ ಒಂದು ಕೋಟಿ ೭೫ ಲಕ್ಷ ರೂಪಾಯಿಯಲ್ಲಿ ರೈತರು ಸಾಲ ತೆಗೆದುಕೊಂಡಿರುವುದು ಕೇವಲ ೭೫ ಲಕ್ಷ ಮಾತ್ರ. ಉಳಿದ ರೈತರು ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತಿಲ್ಲ. ಈ ಸಾಲದ ಸೌಲಭ್ಯವನ್ನು ಪೂರ್ಣವಾಗಿ ರೈತರು ಉಪಯೋಗಿಸುವಂತಾಗಲು ಕಾನೂನಿನಲ್ಲಿ ಕೆಲವು ಎಕ್ಷೆಂಷನ್ ಕೊಡುವುದು ಸೂಕ್ತ ಅದನ್ನು ತಾವು ದಯಮಾಡಿ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ,—ಸ್ವಾಮಿ ವಿರೋಧಪಕ್ಷದವರು ಹೇಳುವುದು ಸರಿಯಲ್ಲ. ಸರ್ಕಾರಿ ನೌಕರರಿಗೆ ಸೆಕ್ಯೂರಿಟಿ ಇದೆ. ಪಾರ್ಲಿಸಿಲ್ ಫಾರ್ಮರ್ಸ್‌ಗೆ ಏನಿವೆ ಸ್ವಾಮಿ. ಅವರಿಗೆ ಸೆಕ್ಯೂರಿಟಿ ಇದೆಯೇ? ಜಮೀನು ಕೆಲಸ ಮಾಡುವವರಿಗೆ ಏನು ಸೆಕ್ಯೂರಿಟಿ ಇದೆ. ಸರ್ವೇಸಾಮಾನ್ಯರೆಲ್ಲರಿಗೂ ರಿಯಾಯಿತಿ ಕೊಟ್ಟರೆ ಸರ್ಕಾರಕ್ಕೆ ಅದರಿಂದ ಆದಾಯ ಬೇಡವೇ? ಉತ್ತೇಜನವನ್ನು ಯಾರಿಗೆ ಕೊಡ ಬೇಕು ಯಾರಿಗೆ ಕೊಡಬಾರದು ಎನ್ನುತಕ್ಕ ವಿವೇಚನೆ ಇಲ್ಲದೇ ಹೋದರೆ ಹೇಗೆ ಸ್ವಾಮಿ? ಮಾನ್ಯ ಸದಸ್ಯರು ಏನೊಂದು ಹೇಳಿದ್ದಾರೆ ಅದರ ಅಂಕಿಅಂಶಗಳನ್ನು ತರಿಸಿಕೊಂಡು ಅದನ್ನು ಪುನಃ ಪರಿಶೀಲನೆ ಮಾಡುವು ದಕ್ಕೆ ಏನಾದರೂ ಅವಕಾಶವನ್ನು ಮಾಡುತ್ತೇನೆ.

Matters under rule 312 :

(i) *re : higtaer remuneration to the Valuers of Answer Papers of the S S L C Examination.*

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ);—ಮಾನ್ಯ ಅಧ್ಯಕ್ಷರೇ, ಈಗಾಗಲೇ ಎಸ್.ಎಸ್ ಎಲ್.ಸಿ. ಉತ್ತರ ಪತ್ರಿಕೆಗಳನ್ನು ತಪಾಸಣೆ ಮಾಡತಕ್ಕ ಸುಮಾರು ೪,೦೦೦ ಶಾಲಾ ಶಿಕ್ಷಕರು ರಾಜ್ಯದಾ ದ್ಯಂತ ಸಂಪಿನಲ್ಲಿದ್ದು, ತಪಾಸಣೆಯ ಕೆಲಸ ನಿಂತುಹೋಗಿದೆ. ಶಿಕ್ಷಣ ಮಂತ್ರಿಗಳಿಗೂ ಹಾಗೂ ಅಧಿಕಾರಿ ಗಳಿಗೆ ತಮ್ಮ ಬೇಡಿಕೆಗಳ ಬಗ್ಗೆ ಮನವಿಗಳನ್ನು ಕೂಡ ಸಲ್ಲಿಸಿದ್ದಾರೆ. ಇವರ ಕೆಲವೊಂದು ಬೇಡಿಕೆಗಳು ನನ್ನ ದೃಷ್ಟಿಯಲ್ಲಿ ಸಮಂಜಸವಾಗಿವೆ. ಮೊಟ್ಟಮೊದಲನೆಯಾದಾಗಿ ದಿನಭತ್ಯದ ಬಗ್ಗೆ ಅವರ ಬೇಡಿಕೆ ಇದೆ. ಬೆಂಗಳೂರು ನಗರದಲ್ಲಿ ದಿನಭತ್ಯ ೧೦ ರೂಪಾಯಿ ಕೊಡುತ್ತಿದ್ದೀರಿ; ಹುಬ್ಬಳ್ಳಿ, ಬೆಳಗಾಂ ಹಾಗೂ ಮೈಸೂರು ನಗರಗಳಲ್ಲಿ ೮ ರೂಪಾಯಿ ಕೊಡುತ್ತಿದ್ದೀರಿ. ತಮಗೆ ಗೊತ್ತಿದ್ದಂತೆ ಇವರು ಮೌಲ್ಯ ಮಾಪನ ಮಾಡಲಿಕ್ಕೆ ಬಂದವರು ಹೋಟಲುಗಳಲ್ಲಿ ಉಳಿದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಯಾವ ಹೋಟಿ ಲಿನಲ್ಲಿ ೧೨ರೂಪಾಯಿಗಳಿಗೆ ರೂಮು ಸಿಗುತ್ತದೆ ? ತಾವು ಕೊಡತಕ್ಕ ೧೦ ರೂಪಾಯಿನಲ್ಲಿ ಕಾಫಿ, ತಿಂಡಿ, ಊಟ ಹಾಗೂ ಇಳಿದುಕೊಳ್ಳುವುದಕ್ಕೆ ಆಗುತ್ತದೆಯೆ ? ಸರ್ಕಾರದವರೇ ಶಿಕ್ಷಕರು ಮೌಲ್ಯ ಮಾಪನ ಮಾಡಲಿಕ್ಕಾಗಿ ಬಂದಾಗ ಅವರು ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ, ಅವರಿಗೆ ಕಾಫಿ ತಿಂಡಿ ಊಟ ಹಾಕಲಿಕ್ಕೆ ವ್ಯವಸ್ಥೆ ಮಾಡಿ; ೧೦–೧೨ ರೂಪಾಯಿ ತಾವು ಕೊಡುವುದೇ ಬೇಡ. ಸ್ವಾಮಿ, ಶಿಕ್ಷಕರು ಊರು ಬಿಟ್ಟು ಇಲ್ಲಿಗೆ ಬಂದು ತಮ್ಮ ಕೈಯಿಂದ ಹಣ ಖರ್ಚು ಮಾಡಿಕೊಂಡು ಕೆಲಸಮಾಡುವುದಕ್ಕೆ ಸಾಧ್ಯ ವಾಗುವುದಿಲ್ಲ. ಅವರು ಕೇಳತಕ್ಕ ದಿನಭತ್ಯ ಸಮಂಜಸವಾಗಿದೆ ತಾವು ದಯವಿಟ್ಟು ಒಪ್ಪಬೇಕು. ಒಂದು ಪತ್ರಿಕೆಯನ್ನು ಮೌಲ್ಯ ಮಾಪನಮಾಡುವುದಕ್ಕೆ ಒಂದು ರೂಪಾಯಿ ಕೊಡುತ್ತಿದ್ದೀರಿ.ಅವರು ೨ ರೂಪಾಯಿ ಕೇಳುತ್ತಿದ್ದಾರೆ, ಒಂದೂವರೆ ರೂಪಾಯಿ ಕೊಡಬಹುದೆಂದು ಸಲಹೆ ಮಾಡುತ್ತೇನೆ. ಮೂರನೆಯದಾಗಿ